ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂ.ಸಾಆ/ಗಣಕ/ವೈವ-83/2019-20

ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ,
ಕೆ.ಹೆಚ್. ರಸ್ತೆ ಶಾಂತಿನಗರ, ಬೆಂಗಳೂರು-27.
ದಿನಾಂಕ:02-07-2020. ದೂ:080-22214900
ಮಿಂಚಂಚೆ: transcom@nic.in.

## <u>ಸುತ್ತೋಲೆ</u>

<u>ವಿಷಯ</u> : ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಲ್ಲಿ ಭಾರತ್ ಸ್ಟೇಜ್-4 ಮತ್ತು ಭಾರತ್ ಸ್ಟೇಜ್-6 ವಾಹನಗಳ ಸಿಂಧುತ್ವ ಅವಧಿ ಸೇರ್ಪಡೆ ಆದೇಶ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ. ಜಿ.ಎಸ್.ಆರ್.103(ಇ), ದಿನಾಂಕ:23-02-2012 ರಲ್ಲಿ ಭಾರತ್ ಸ್ಟೇಜ್-4 ವಾಹನಗಳಿಗೆ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಮಾಣಪತ್ರದ ಅವಧಿಯು 12 ತಿಂಗಳ ಅವಧಿ ಇರುತ್ತದೆ. ವಾಯುಮಾಲಿನ್ಯ ಪರೀಕ್ಷಣಾ ಕೇಂದ್ರಗಳಲ್ಲಿ ಮೋಟಾರು ವಾಹನಗಳಿಗೆ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಪತ್ರಗಳನ್ನು ನೀಡುವಾಗ ಸರ್ಕಾರದ ಆದೇಶ ಸಂಖ್ಯೆ: ಸಾರಿಇ 79 ಸಾಇಪ 2015, ಬೆಂಗಳೂರು, ದಿನಾಂಕ:21-07-2015ರ ಆದೇಶ ಭಾಗದ ಷರತ್ತುಗಳ ಕ್ರಮ ಸಂಖ್ಯೆ.05 ರಲ್ಲಿನ

> ***"5. ಕೇಂದ್ರ ಮೋಟಾರು ವಾಹನ ನಿಯಮಾವಳಿ, 1989ರ ನಿಯಮ 115ರ ಪ್ರಕಾರ ಮಾಲಿನ್ಯ ಪ್ರಮಾಣದೊಳಗಿನ ವಾಹನಗಳಿಗೆ ಮಾತ್ರ ಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಪತ್ರವನ್ನು ನೀಡಬೇಕು ಹಾಗೂ ಇದರ ಸಿಂಧುತ್ವ ಅವಧಿ ನೀಡಿದ ದಿನಾಂಕದಿಂದ 6 ತಿಂಗಳೊಳಗಾಗಿರಬೇಕು."***

ಮೇಲ್ಕಂಡ ಷರತ್ತಿನ ನಂತರ ***"ಹಾಗೂ ಭಾರತ್ ಸ್ಟೇಜ್-4 ಮತ್ತು ಭಾರತ್ ಸ್ಟೇಜ್-6 ವಾಹನಗಳಿಗೆ ಮಾತ್ರ ಸಿಂಧುತ್ವ ಅವಧಿ ಪ್ರಪತ್ರ ನೀಡಿದ ದಿನಾಂಕದಿಂದ 12 ತಿಂಗಳಿರಬೇಕು"*** ಎಂದು ಸೇರಿಸಿ ಓದಿಕೊಳ್ಳತಕ್ಕದ್ದು ಎಂದು ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಟಿಡಿ 46 ಟಿಡಿಓ 2020, ಬೆಂಗಳೂರು, ದಿನಾಂಕ: 12-06-2020ರ ಆದೇಶದಲ್ಲಿ ತಿಳಿಸಲಾಗಿರುತ್ತದೆ. ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಾರಿಇ 79 ಸಾಇಪ 2015, ಬೆಂಗಳೂರು, ದಿನಾಂಕ:21-07-2015ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆದುದರಿಂದ, ವಾಯುಮಾಲಿನ್ಯ ಪರೀಕ್ಷಣಾ ಕೇಂದ್ರಗಳಲ್ಲಿ ಮೋಟಾರು ವಾಹನಗಳಿಗೆ ವಾಯುಮಾಲಿನ್ಯ ನಿಯಂತ್ರಣದಲ್ಲಿದೆ ಎಂಬ ಪ್ರಪತ್ರಗಳನ್ನು ನೀಡುವಾಗ ಮೇಲ್ಕಂಡಂತೆ ಕ್ರಮವಹಿಸಲು ಸೂಚಿಸಲಾಗಿದೆ.

10/07

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

ಇವರಿಗೆ,

1) ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು ಮತ್ತು ಜಂಟಿ ಸಾರಿಗೆ ಆಯುಕ್ತರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ಅಪರ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ-ಆಡಳಿತ) ಬೆಂಗಳೂರು ರವರು ಸುತ್ತೋಲೆಯ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ / ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4) ರಾಜ್ಯದ ಎಲ್ಲಾ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಮಾಲೀಕರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.